

ಸೀರೆಗಳಲ್ಲಿ ಪೋಚಂಪಲ್ಲಿ ಸೀರೆ ಬಹಳ ಪ್ರಸಿದ್ಧ. ಪೋಚಂಪಲ್ಲಿ ಸೀರೆಯನ್ನು ಮಹಿಳೆಯರು ಮುಗಿಬಿದ್ದು ಕೊಂಡುಕೊಳ್ಳಲು ಕಾರಣಗಳೇನು? ಬಣ್ಣ, ವಿನ್ಯಾಸ, ಬಾಳಿಕೆ, ತಾಜಾತನಗಳನ್ನು ಕಾಪಾಡಿಕೊಂಡು ಬಂದಿರುವ ಪೋಚಂಪಲ್ಲಿ ಸೀರೆಯ ಹಿರಿಮೆ ಎಂಥದ್ದು? ಇಲ್ಲಿದೆ ಸಮಗ್ರ ವಿಶ್ಲೇಷಣೆ.

■ ಮುಕುಂದ ಕಿರಸೂರ್
ರಾಧಾಲಕ್ಷ್ಮೀ ವೈ.ಸಿ

# ಪೋಚಂಪಲ್ಲಿ ಸೀರೆ: ವಸ್ತ್ರ ಕಾವ್ಯ!

ಸೀರೆಗಳಲ್ಲಿ ಅದೆಷ್ಟು ವೈವಿಧ್ಯ? ಕಾಂಜೀಪುರಂ, ಬನಾರಸ್, ಮೊಳಕಾಲ್ಮುರು... ಇವೆಲ್ಲವೂ ಸುಪ್ರಸಿದ್ಧ. ಈ ಸೀರೆಗಳ ಸಾಲಿಗೆ ಸೇರಿದ ಮತ್ತೊಂದು ಸೀರೆ ವೈವಿಧ್ಯವೇ ಪೋಚಂಪಲ್ಲಿ ಸೀರೆ. ಪೋಚಂಪಲ್ಲಿ ಸೀರೆ ಇಷ್ಟೊಂದು ಪ್ರಸಿದ್ಧವಾದದ್ದು ಹೇಗೆ? ಈ ಸೀರೆಯ ಹಿನ್ನೆಲೆ ಏನು? ಮಹಿಳೆಯರು ಮುಗಿಬೀಳುವ ಈ ಸೀರೆಯಲ್ಲಿ ಅದೆಂಥ ಸೋಜಿಗವಿದೆ?

ಪೋಚಂಪಲ್ಲಿ – ತೆಲಂಗಾಣದ ರಾಜಧಾನಿ ಹೈದರಾಬಾದಿನಿಂದ ಸುಮಾರು 60 ಕಿ.ಮೀ. ದೂರವಿರುವ ಪುಟ್ಟ ಪಟ್ಟಣ. ಊರ ದೇವತೆ ಪೋಚಮ್ಮಳಿಂದ ತನ್ನ ಹೆಸರನ್ನು ಪಡೆದಿದೆ. ಈಗ ಈ ಊರಿನ ಹೆಸರು ಭೂದಾನ ಪೋಚಂಪಲ್ಲಿ! ವಿಶ್ವವಿಖ್ಯಾತ ಪೋಚಂಪಲ್ಲಿ ನೇಯ್ಗೆ, ವಸ್ತ್ರ ಕಲೆಯನ್ನೇ ನಂಬಿಕೊಂಡಿರುವ ಸಾವಿರಾರು ಕುಟುಂಬಗಳಿಗೆ ಕೇವಲ ಒಂದು ಉದ್ಯೋಗ ಮಾತ್ರವಲ್ಲ, ಅವರಿಗೊಂದು ಜೀವನ ವಿಧಾನ ಕೂಡ! ಅದು ಅವರ ಬದುಕು, ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಕಡಿಮೆ ಮಳೆ ಬೀಳುವ, ಒಣ ಬೇಸಾಯವನ್ನೇ ಅವಲಂಬಿಸಿರುವ ಈ ಪ್ರದೇಶದಲ್ಲಿ ನೇಕಾರಿಕೆಗೇ ಪ್ರಥಮ ಆದ್ಯತೆ! ಹೆಚ್ಚು ಕಡಿಮೆ ಊರಿನ ಎಲ್ಲಾ ಮನೆಗಳಲ್ಲಿ ಮಗ್ಗಗಳ ಸದ್ದಿನ ಏಕತಾನತೆ! ಪದ್ಮಸಾಲಿ ಜನಾಂಗದವರೇ ಹೆಚ್ಚಾಗಿರುವ ಈ ಊರು ಹಾಗೂ ಇದರ ಸುತ್ತಮುತ್ತಲ ಪ್ರದೇಶಗಳಲ್ಲಿ ಪೋಚಂಪಲ್ಲಿ ನೇಯ್ಗೆ ದಟ್ಟವಾಗಿ ಪಸರಿಸಿದೆಯಾದರೂ ಹೆಸರು ಮಾತ್ರ ಪೋಚಂಪಲ್ಲಿಯದೇ!

ಪೋಚಂಪಲ್ಲಿಯ ಬಣ್ಣ ತಡೆ (ಟೈ ಅಂಡ್ ಡೈ) ತಾಂತ್ರಿಕತೆ, ಇಂಡೋನೇಷ್ಯಾ, ಜಪಾನ್, ಸ್ವೀಡನ್, ಡೆನ್ಮಾರ್ಕ್, ಫಿನ್ಲೆಂಡ್, ಮ್ಯಾನಮಾರ್, ಗ್ವಾಟೆಮಾಲಾ ಇತ್ಯಾದಿ ದೇಶಗಳಲ್ಲಿ ಕೂಡ ಅಸ್ತಿತ್ವದಲ್ಲಿದೆ. ಆದರೆ ತೆಲಂಗಾಣದ ಈ ವಿಶಿಷ್ಟ ತಾಂತ್ರಿಕತೆ ಒಡಿಶಾ ಇಲ್ಲವೇ ಗುಜರಾತಿನಿಂದ ಪ್ರೇರಿತವಾಗಿದೆ ಎಂದು ಹೇಳಲಾಗುತ್ತದೆ. ಅಲ್ಲಿಂದ ಅದು ಬಂದರು ನಗರ, ಚಿರಾಲವನ್ನು ತಲುಪಿರಬಹುದು. ಆದರೆ ಇನ್ನೊಂದು ಐತಿಹ್ಯದ ಪ್ರಕಾರ ಚಿರಾಲದ ಪ್ರಖ್ಯಾತ ವಸ್ತ್ರ ವಿನ್ಯಾಸಗಾರ ಶ್ರೀಪೆಂಡಮ್ ಕೇಶವುಲು, ಈ ತಂತ್ರವನ್ನು ಅಭಿವೃದ್ಧಿಪಡಿಸಿದ್ದು ಅಂದು ಇದನ್ನು 'ಚುಟ್ಕಾ' ಎಂದು ಕರೆಯಲಾಗುತ್ತಿತ್ತು. ಇದನ್ನು ಬಳಸಿ ತಯಾರಿಸಿದ 'ತೇಲಿಯಾ ರುಮಾಲ್' ವಿಶ್ವಪ್ರಸಿದ್ಧ.

ಇಂದು ಪೋಚಂಪಲ್ಲಿ ಹಾಗೂ ಇತರ ಸುತ್ತಮುತ್ತಲ ಪುಟ್ಟಪಾಕ, ಕೋಯಾಲ್ ಗುಡಮ್ ಇತ್ಯಾದಿ ಹಳ್ಳಿಗಳಲ್ಲಿ ಸಾವಿರಾರು ನೇಕಾರರು ಈ "ಬಣ್ಣ ತಡೆ" ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿದ್ದಾರೆ. ಒಂದೊಂದು ಹಳ್ಳಿಯೂ ಒಂದೊಂದು ವಸ್ತ್ರಪ್ರಕಾರಕ್ಕೆ ಪ್ರಖ್ಯಾತ! ಪೋಚಂಪಲ್ಲಿ ತನ್ನ ಒಂಟಿ ಹಾಗೂ ಜೋಡಿ ಇಕತ್